ಉದಯವಾಣಿ
ಕನ್ನಡ ದಿನಪತ್ರಿಕೆ

Tuesday, February 9th, 2010

# ಅಂತಾರಾಷ್ಟ್ರೀಯ ನಾಟಕೋತ್ಸವಕ್ಕೆ ತೆರೆ



ಬೆಂಗಳೂರು, ಫೆ. 8: ವಿಶ್ವವೇ ವೇದಿಕೆಯಾಗಿದ್ದು ನಾವೆಲ್ಲರೂ ನಮ್ಮ ಪಾತ್ರವನ್ನು ಸರಿಯಾಗಿ ನಿಭಾಯಿಸ ಬೇಕಾಗಿದೆ ಎಂದು ಚಿತ್ರನಟ ರಮೇಶ್ ಅರವಿಂದ್ ಹೇಳಿದರು.

ಜೈನ್ ವಿ.ವಿ. ಆಯೋಜಿಸಿದ್ದ ಅಂತಾರಾಷ್ಟ್ರೀಯ ನಾಟಕೋತ್ಸವ 'ಅಭಿನಯ'ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಕಠಿಣ ಪರಿಶ್ರಮದಿಂದ ವ್ಯಕ್ತಿ ತನ್ನ ಕಾರ್ಯಕ್ಷೇತ್ರದಲ್ಲಿ ಉನ್ನತ ಸ್ಥಾನಕ್ಕೇರಲು ಸಾಧ್ಯ ಎಂದರು.

ಹಿರಿಯ ಚಿತ್ರನಟಿ ಯಮುನಾ ಮೂರ್ತಿ, ನಾಟಕ ವೆಂಬುದು ಅಂತ್ಯವಿಲ್ಲದ ಯಾನ. ವೈಜ್ಞಾನಿಕವಾಗಿ ಮುಂದುವರೆದಿರುವ ಈ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿ ಸಮುದಾಯದಲ್ಲಿ ಕಲೆಯ ಬಗ್ಗೆ ಆಸಕ್ತಿ ಮೂಡಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗಿದೆ ಎಂದರು.

ಸಮಾರಂಭದಲ್ಲಿ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ನರಸಿಂಹಮೂರ್ತಿ, ನಾಟಕಕಾರ ಹೂಲಿಶೇಖರ್, ಚಿತ್ರನಟ ದೇವರಾಜ್, ಯಮುನಾ ಮೂರ್ತಿ, ರಮೇಶ ಅರವಿಂದ್‌ರನ್ನು ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಜೈನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಆರ್. ಚೆನ್ನರಾಜ್ ಜೈನ್, ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಲು ನಾಟಕ ಉತ್ತಮ ಮಾಧ್ಯಮ ಎಂದರು. ದೆಹಲಿ, ಮುಂಬೈ, ಕೋಲ್ಕತ್ತಾ, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ 40ಕ್ಕೂ ಹೆಚ್ಚು ತಂಡಗಳು ನಾಟಕೋತ್ಸವದಲ್ಲಿ ಪಾಲ್ಗೊಂಡಿದ್ದವು. ಎಸ್‌ಎಸ್ ಎಂಆರ್‌ವಿ ಕಾಲೇಜಿನ ತಂಡವು ಸತತ ಮೂರನೇ ವರ್ಷವೂ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ರಾಕೇಶ್‌ಬೇಡಿಯವರ ತಾಜ್‌ಮಹಲ್ ಕಾ ಟೆಂಡರ್(ಹಿಂದಿ), ಲಕ್ಷ್ಮೀ ಚಂದ್ರಶೇಖರ್‌ರವರ ಆಲ್ಸ್ ವೆಲ್(ಇಂಗ್ಲಿಷ್) ಮಾಸ್ಟರ್ ಹಿರಣ್ಣಯ್ಯನವರ ಲಂಚಾವಾತಾರ (ಕನ್ನಡ) ವಿಶೇಷವಾಗಿ ಗಮನ ಸೆಳೆದ ನಾಟಕಗಳಾಗಿದ್ದವು.